ಋ) ಹಾಗಿದ್ದಲ್ಲಿ, ಈ ಠಾಣೆಯ ವ್ಯಾಪ್ತಿಯಿಂದ ಬೇರ್ಪಡಿಸಿ ಗ್ರಾಮಾಂತರ ಪೊಲೀಸ್ ಠಾಣೆ ತೆರಯುವ ಸಂಭವ ಏನಾದರೂ ಇದೆಯೆ;

ೠ) ಇದ್ದಲ್ಲಿ, ಏಂದಿನಿಂದ ಗ್ರಾಮಾಂತರ ಪೊಲೀಸ್ ಠಾಣೆ ಆರಂಭಿಸಲಾಗುವುದು, ಇಲ್ಲದಿದ್ದಲ್ಲಿ ಆದಕ್ಕೆ ಕಾರಣವೇನು ?

ಶ್ರೀರಾಮನಾಥ ರೈ (ರಾಜ್ಯ ಗೃಹ ಸಚಿವರು):–

ಅ) ಹೌದು, ತೊಗಲೂರನ್ನು ಬಿಟ್ಟು

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಊ) ಇಲ್ಲ

ಋ) ಇಲ್ಲ

ೠ) ಉದ್ಭವಿಸುವುದಿಲ್ಲ

ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಕೇಂದ್ರ ಗೃಹ ಸಚಿವರ ಹೇಳಿಕೆ

257 (312) ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):-

ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತ್ತೀಚೆಗೆ ಕೇಂದ್ರದ ಗೃಹ ಸಚಿವರು ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ಸಮಸ್ಯೆ ಬಗ್ಗೆ ಗೋವಾದಿಂದ ನೀಡಿದ ಹೇಳಿಕೆ ಸರಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅದರ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಹೌದು

ಆ) ಯಾವುದೇ ಕ್ರಮದ ಅಗತ್ಯವಿಲ್ಲ.

ಸಾರಾಯಿಯನ್ನು ಸ್ಯಾಚೆಟ್‌ನಲ್ಲಿ ಮಾರಾಟ ಮಾಡುವುದು

222 (774) ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಮುಖ್ಯ ಮಂತ್ರಿಗಳು ಸಾರಾಯಿಯನ್ನು ಸ್ಯಾಚೆಟ್‌ಗಳಲ್ಲಿ ಮಾರಾಟ ಮಾಡುವುದನ್ನು ನಿಲ್ಲಿಸುವುದಾಗಿ ಆಶ್ವಾಸನೆ ಕೊಟ್ಟಿರುವ ವಿಷ ನಿಜವಲ್ಲವೇ;

2. ಹಾಗಿದ್ದಲ್ಲಿ, ಸ್ಯಾಚೆಟ್‌ನಲ್ಲಿ ಸಾರಾಯಿ ಮಾರಾಟ ನಿಂತಿರುವುದೇ;